# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 01/2020**

**ದೋ.ಸಾ. : 04 ಫ್ರಾ.ಸಾ. : 01**

| | | |
|---|---|---|
| ಸಾಕ್ಷಿಯ ಹೆಸರು | : | ರಾಮಚಂದ್ರ ಬೀರಣ್ಣ ನಾಯಕ |
| ತಂದೆಯ ಹೆಸರು | : | ಬೀರಣ್ಣ ನಾಯಕ |
| ವಯಸ್ಸು | : | 54 ವರ್ಷ |
| ಕೆಲಸ | : | ಮುಖ್ಯ ಪೇದೆ, ಕರಾವಳಿ ಕಾವಲು ಪಡೆ ಪೋಲಿಸ್ ಠಾಣೆ, ಬೇಲೆಕೇರಿ |
| ವಾಸ | : | ಬೇಲೆಕೇರಿ, ತಾಃ ಅಂಕೋಲಾ |

**ದಿನಾಂಕಃ 17-09-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**(ಸಾಕ್ಷಿಯ ವಿಚಾರಣೆಯನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ 299 ರಡಿಯಲ್ಲಿ ಪಡೆದುಕೊಳ್ಳಲಾಗಿರುತ್ತದೆ)**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ದಿಃ 23-07-2012 ರಿಂದ ದಿಃ 23-07-2018 ರ ವರೆಗೆ ನಾನು ಗೋಕರ್ಣ ಪೋಲಿಸ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಆ ಸಮಯದಲ್ಲಿ ಚಾಸಾ 1 ನಮ್ಮ ಠಾಣೆಯ ಪಿ.ಎಸ್.ಆಯ್. ಆಗಿದ್ದರು. ದಿನಾಂಕಃ 29-11-2013 ರಂದು ನಾನು ಮನೆಯಲ್ಲಿದ್ದಾಗ, ಠಾಣೆಯಿಂದ ಬಂದ ಕರೆಯ ಮೇರೆಗೆ ನಾನು ಕರ್ತವ್ಯಕ್ಕೆ ಹೋಗಿದ್ದೇನೆ. ಆ ಸಮಯದಲ್ಲಿ ಚಾಸಾ 1 ರವರು ನನಗೆ ಇಬ್ಬರು ಪಂಚ ಸಾಕ್ಷಿಯನ್ನು ಕರೆದುಕೊಂಡು ಬರಲು ಹೇಳಿದ್ದರಿಂದ ನಾನು, ಚಾಸಾ 2 ಮತ್ತು 3 ಪಂಚ ಸಾಕ್ಷಿಗಳನ್ನು ಕರೆದುಕೊಂಡು ಬಂದಿದ್ದೆ. ತದನಂತರ ಚಾಸಾ 1 ರವರು ಚಾಸಾ 4, 5, 8 ರಿಂದ 10 ರವರಿಗೆ ಒಂದು ಬಾತ್ಮಿ ಬಂದಿದ್ದು, ಅದಂರತೆ ಚಾಸಾ-1 ರವರು ದಾಳಿ ಮಾಡಬೇಕೆಂದು ತಿಳಿಸಿರುತ್ತಾರೆ. ಅದರಂತೆ ನಾವು ಅದೇ ದಿನ ಬೆಳಿಗೆ 7-50 ಗಂಟೆಗೆ ಠಾಣೆಯಿಂದ ಇಲಾಖಾ ವಾಹನದಲ್ಲಿ ಗೋಕರ್ಣದ ಮೇಲಿನಕೇರಿಯ ಮಾರ್ಗವಾಗಿ ಓಂ ಬೀಚ್ ರಸ್ತೆಗೆ ಹೋಗುವಾಗ, ನೀರುಹಳ್ಳ ಕ್ರಾಸ್ ಬಳಿ ಬಾತ್ಮಿಯಂತೆ ದರೋಡೆ ಮಾಡಲು 6 ಜನ ವ್ಯಕ್ತಿಗಳು 2 ವಾಹನಗಳನ್ನು

ನಿಲ್ಲಿಸಿಕೊಂಡು, ನಿಂತಿರುವುದು ಕಂಡುಬಂದಿರುತ್ತದೆ. ಆಗ ನಾವು ನಮ್ಮ ವಾಹನವನ್ನು100 ಮೀ. ಅಂತರದಲ್ಲಿ ಮರೆಯಲ್ಲಿ ನಿಲ್ಲಿಸಿ, ಅಲ್ಲಿಗೆ ನಡೆದುಕೊಂಡು ಹೋಗಿರುತ್ತೇವೆ. ಅಲ್ಲಿಗೆ ಹೋದಾಗ ಆರೋಪಿತರು ದರೋಡೆ ಮಾಡುವ ಉದ್ದೇಶದಿಂದ ಕೈಯಲ್ಲಿ ಕಬ್ಬಿಣದ ರಾಡ್, ದೊಣ್ಣೆ ಹಾಗೂ ಹಗ್ಗವನ್ನು ಹಿಡಿದುಕೊಂಡಿದ್ದರು. ಸ್ದ್ರಿಯವರು ನಮ್ಮನ್ನು ನೋಡಿ ಓಡಿ ಹೊಗಲು ಪ್ರಯತ್ನಪಟ್ಟಿರುತ್ತಾರೆ. ಆ ಸಮಯದಲ್ಲಿ ಚಾಸಾ-1 ಮತ್ತು ಚಾಸಾ-8 ರವರು 1 ನೇ ಆರೋಪಿಯನ್ನು ಮತ್ತು ನಾನು ಹಾಗೂ ಚಾಸಾ-9 ರವರು 2 ನೇ ಆರೋಪಿಯನ್ನು ಹಿಡಿದುಕೊಂಡೆವು, ಉಳಿದ 4 ಜನ ಆರೋಪಿಗಳು ತಪ್ಪಿಸಿಕೊಂಡಿರುತ್ತಾರೆ. ಉಳಿದ ಸಿಬ್ಬಂದಿಗಳು ಸದರಿ ಆರೋಪಿಗಳನ್ನು ಬೆನ್ನಟ್ಟಿದ್ದರೂ ಸಹ ಅವರು ಸಿಕ್ಕಿರುವುದಿಲ್ಲ. ದಾಳಿ ವೇಳೆಯಲ್ಲಿ ಸಿಕ್ಕ ಆರೋಪಿಗಳ ಅಂಗ ಶೋಧನೆ ಮಾಡಿದಾಗ, 1 ನೇ ಆರೋಪಿಯ ಪ್ಯಾಂಟ್ ನ ಕಿಸೆಯಲ್ಲಿ 1 ನೋಕಿಯಾ ಮೊಬೈಲ್ ಮತ್ತು ವಿವಿಧ ಮುಖ ಬೆಲೆಯ ಒಟ್ಟು ರೂ.1,000/-ನಗದು ಹಣ ಹಾಗೂ ಆತನ ಬಳಿ 1 ಕಬ್ಬಿಣದ ರಾಡ್ ಸಿಕ್ಕಿರುತ್ತದೆ, 2 ನೇ ಆರೋಪಿಯನ್ನು ಶೋಧನೆ ಮಾಡಿದಾಗ, ಆತನ ಪ್ಯಾಂಟ್‌ನ ಜೇಬಿನಲ್ಲಿ 1 ನೊಕಿಯಾ ಮೊಬೈಲ್ ಹಾಗೂ ವಿವಿಧ ಮುಖ ಬೆಲೆಯ ಒಟ್ಟು ರೂ.1,200/- ನಗದು ಹಣ ಮತ್ತು 1 ಕಟ್ಟಿಗೆ ದೊಣ್ಣೆ ಸಿಕ್ಕಿರುತ್ತದೆ, ಆಗ ನಾವು ಆರೋಪಿತರು ತಂದಿದ್ದ 1 ಮಹಿಂದ್ರಾ ಕಾರು ಮತ್ತು ಇನ್ನೊಂದು ಮಾರುತಿ ಓಮಿನಿಯನ್ನು ಪರಿಶೀಲೀಸಲಾಗಿ, ಮಹಿಂದ್ರಾ ಕಾರಿಗೆ ಹಿಂಬದಿ ಸೀಟು ಇರಲಿಲ್ಲ, ಆದರೆ ಅದರಲ್ಲಿ ಖಾರದ ಪುಡಿಯ ಡಬ್ಬ, ಮಫ್ಲರ್ ಹಾಗೂ ದೊಣ್ಣೆಗಳು ಇದ್ದವು. ಅದೇ ರೀತಿ ಮಾರುತಿ ಓಮಿನಿ ಕಾರಿನಲ್ಲಿ ಕಟ್ಟಿಗೆಯ ದೊಣ್ಣೆ, ಪ್ಲಾಸ್ಟಿಕ್ ಕವರಿನಲ್ಲಿ ಖಾರದ ಪುಡಿ ಮತ್ತು ಹಗ್ಗ ಇದ್ದವು ಹಾಗೂ ಒಂದು ಗಮ್ ಟೇಪ್ ಸಹ ಇತ್ತು. ಸ್ದ್ರಿ ವಾಹನಗಳಲ್ಲಿ ವಾಹನದ ದಾಖಲೆಗಳು ಸಹ ಇದ್ದವು. ಸ್ದ್ರಿ ಜಾಗಕ್ಕೆ ವಿದೇಶಿಗರು ಮತ್ತು ಪ್ರವಾಸಿಗರು ಬರುವುದರಿಂದ ಆರೋಪಿತರು ಅವರಿಂದ ದರೋಡೆ ಮಾಡುವ ಮತ್ತು ಸುಲಿಗೆ ಮಾಡುವ ಉದ್ದೇಶದಿಂದ ಪೂರ್ವಸಿದ್ಧತೆ ಮಾಡಿಕೊಂಡು ಬಂದಿರುವುದಾಗಿ ಹೇಳಿರುತ್ತಾರೆ.

2. ನಂತರ ಚಾಸಾ 1 ರವರು ಸ್ದ್ರಿ ಸಿಕ್ಕ ಆರೋಪಿತರನ್ನು ದಸ್ತಗಿರಿ ಮಾಡಿ, ಸಿಕ್ಕ ವಸ್ತುಗಳನ್ನು ಪಂಚನಾಮೆ ಮುಖಾಂತರ ಜಪ್ತುಪಡಿಸಿಕೊಂಡಿರುತ್ತಾರೆ. ಸ್ದ್ರಿ ಪಂಚನಾಮೆಯನ್ನು ಚಾಸಾ 2 ಮತ್ತು 3 ರವರ ಹೇಳಿಕೆಯಂತೆ ನಾನೇ ಬರೆದಿರುತ್ತೇನೆ. ತದನಂತರ ಆರೋಪಿತರು ಹಾಗೂ ಮಾಲುಗಳು ಕಾಣುವ ಹಾಗೆ ಒಂದು ಛಾಯಾಚಿತ್ರ ಸಹ ತೆಗೆದಿರುತ್ತೇವೆ. ಸಾಕ್ಷಿಯು ಆ ದಿನ ತಾನು ಬರೆದ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1 ಎಂದು, ಸಾಕ್ಷಿಯ

ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಯಿತು. ಪಂಚನಾಮೆಯ ಕಾಲಕ್ಕೆ ತೆಗೆದ ಫೋಟೋವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ–2 ಎಂದು ಗುರುತಿಸಲಾಯಿತು.

3. ದಾಳಿಯ ವೇಳೆಯಲ್ಲಿ ಜಪ್ತು ಪಡಿಸಿಕೊಂಡಿರುವ ವಸ್ತುಗಳು ಈ ದಿನ ನ್ಯಾಯಾಲಯದ ಮುಂದೆ ಇದ್ದು, ಅವುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು,1 ನೇ ಆರೋಪಿಯಿಂದ ಜಪ್ತು ಪಡಿಸಿಕೊಂಡ ಕಬ್ಬಿಣದ ರಾಡ್ ನ್ನು ಮುದ್ದೆ ಮಾಲು–1 ಎಂದು, ಮೊಬೈಲ್ ನ್ನು ಮುದ್ದೆ ಮಾಲು–2 ಎಂದು ಮತ್ತು ರೂ.1,000 ನಗದು ಹಣವನ್ನು (100 ರೂಪಾಯಿ ಮುಖ ಬೆಲೆಯ ಹಳೆಯ 5 ನೋಟುಗಳು ಮತ್ತು 500 ರೂಪಾಯಿ ಮುಖ ಬೆಲೆಯ ಹಳೆಯ 1 ನೋಟು) ಮುದ್ದೆ ಮಾಲು–3 ಎಂದು, 2 ನೇ ಆರೋಪಿಯಿಂದ ಜಪ್ತು ಪಡಿಸಿಕೊಂಡ ಕಟ್ಟಿಗೆಯ ದೊಣ್ಣೆಯನ್ನು ಮುದ್ದೆ ಮಾಲು–4 ಎಂದು, ನೊಕಿಯಾ ಮೊಬೈಲ್ ನ್ನು ಮುದ್ದೆ ಮಾಲು–5 ಎಂದು, ಮತ್ತು ರೂ.1,200 ನಗದು ಹಣವನ್ನು (100 ರೂಪಾಯಿ ಮುಖ ಬೆಲೆಯ ಹಳೆಯ 7 ನೋಟುಗಳು ಮತ್ತು 500 ರೂಪಾಯಿ ಮುಖ ಬೆಲೆಯ ಹಳೆಯ 1 ನೋಟು) ಮುದ್ದೆ ಮಾಲು–6 ಎಂದು, ಕಾರುಗಳಿಂದ ವಶಪಡಿಸಿಕೊಡ 2 ಬಿಳಿ ಬಣ್ಣದ ಹಗ್ಗಗಳನ್ನು ಮುದ್ದೆ ಮಾಲು–7 ಎಂದು, 3 ಕಟ್ಟಿಗೆ ದೊಣ್ಣೆಗಳನ್ನು ಮುದ್ದೆ ಮಾಲು–8 ಎಂದು, ಖಾರದ ಪುಡಿಯ ಪ್ಲಾಸ್ಟಿಕ್ ಡಬ್ಬವನ್ನು ಮುದ್ದೆ ಮಾಲು–9 ಎಂದು, 2 ಮಫ್ಲರ್ ಗಳನ್ನು ಮುದ್ದೆ ಮಾಲು–10 ಎಂದು, ಖಾರದ ಪುಡಿ ಇರುವ ಪ್ಲಾಸ್ಟಿಕ್ ಕವರನ್ನು ಮುದ್ದೆ ಮಾಲು–11 ಎಂದು, ಒಂದು ಗಮ್ ಟೇಪನ್ನು ಮುದ್ದೆ ಮಾಲು–12 ಎಂದು, ಮಹೀಂದ್ರಾ ವಾಹನದ ಕಾಗದ ಪತ್ರಗಳನ್ನು ಮುದ್ದೆ ಮಾಲು–13 ಎಂದು, ಮಾರುತಿ ಓಮಿನಿ ಕಾರಿನ ದಾಖಲೆಗಳನ್ನು ಮುದ್ದೆ ಮಾಲು–14 ಎಂದು ಗುರುತಿಸಲಾಯಿತು. ಸದ್ರಿ ವಾಹನಗಳನ್ನು ನೋಡಿದರೆ ನಾನು ಗುರುತಿಸುತ್ತೇನೆ. ಈಗ ತೋರಿಸಿದ ಛಾಯಾಚಿತ್ರದಲ್ಲಿ ಮಹೀಂದ್ರಾ ಕಾರು ಇದ್ದು, ಸದ್ರಿ ಛಾಯಾಚಿತ್ರವನ್ನು ನಿಪಿ–3 ಎಂದು, ಈಗ ತೋರಿಸಿದ ಛಾಯಾಚಿತ್ರದಲ್ಲಿ ಮಾರುತಿ ಓಮಿನಿ ಇದ್ದು, ಸದ್ರಿ ಛಾಯಾಚಿತ್ರವನ್ನು ನಿಪಿ–4 ಎಂದು ಗುರುತಿಸಲಾಯಿತು. ಪಂಚನಾಮೆಯ ಕಾಲದಲ್ಲಿ ಘಟನಾ ಸ್ಥಳದ ಕಚ್ಚಾ ನಕ್ಷೆಯನ್ನು ತಯಾರು ಮಾಡಲಾಗಿರುತ್ತದೆ. ತದನಂತರ, ಆರೋಪಿಗಳು ಮತ್ತು ಜಪ್ತು ಪಡಿಸಿಕೊಂಡ ಮಾಲುಗಳ ಸಮೇತ ಠಾಣೆಗೆ ಬಂದಿರುತ್ತೇವೆ. ಅಲ್ಲಿ ಚಾಸಾ–1 ರವರು ಫಿರ್ಯಾದು ನೀಡಿ, ಆರೋಪಿ ಮತ್ತು ಮಾಲುಗಳನ್ನು ಠಾಣಾಧಿಕಾರಿಗೆ ನೀಡಿರುತ್ತಾರೆ. ಈ ಬಗ್ಗೆ ನಾನು ನಮ್ಮ ತನಿಖಾಧಿಕಾರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ಓಡಿ

ಹೋದ ಆರೋಪಿಗಳ ಬಗ್ಗೆ ನಮ್ಮ ಸಿಬ್ಬಂದಿಗಳು ಚಾಸಾ–6 ಮತ್ತು 7 ರವರು ಚಾಸಾ–1 ರವರಿಗೆ ಮಾಹಿತಿ ನೀಡಿದ್ದರು. ಈ ಬಗ್ಗೆ ನಾನು ಮರು ಹೇಳಿಕೆ ನೀಡಿರುತ್ತೇನೆ. 1 ನೇ ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೆ.

**<u>ಮರು ವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ